ನೆಮ್ಮದಿ ಕೇಂದ್ರಗಳು

1042 (931); ಶ್ರೀ ಬಾಲಕೃಷ್ಣ ಹೆಚ್. ಪಿ. (ಮಾಗಡಿ)

ಅ) ಮಾಗಡಿ ತಾಲ್ಲೂಕಿನಲ್ಲಿ ರೈತರುಗಳಿಗೆ ಅನುಕೂಲವಾಗುವಂತೆ ಎಲ್ಲೆಲ್ಲಿ ನೆಮ್ಮದಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ;

ಆ) ಹಾಗಿದ್ದಲ್ಲಿ, ಮಾಗಡಿ ತಾಲ್ಲೂಕು, ಪೂಡಬಾಳ್ ಗ್ರಾಮದಲ್ಲಿ ಸ್ಥಾಪಿಸಿರುವ ನೆಮ್ಮದಿ ಕೇಂದ್ರದಿಂದ ರೈತರುಗಳಿಗೆ ವಿದ್ಯುತ್ ಅಭಾವದಿಂದ ಇಂಟರ್‌ನೆಟ್‌ಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು;

ಶ್ರೀ ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಮಾಗಡಿ ತಾಲ್ಲೂಕಿನ ಮಾಗಡಿ ಕಸಬಾ ಕೇಂದ್ರ, ಕುದೂರು, ತಿಪ್ಪಸಂದ್ರ, ಸ್ಲೋಲೂರು ಮತ್ತು ಮಾಡಬಾಳ್ ಹೋಬಳಿ ಕೇಂದ್ರಗಳಲ್ಲಿ ರೈತರಿಗೆ ಪಹಣಿ ಪತ್ರಿಕೆ ಪ್ರಮಾಣ ಪತ್ರಗಳನ್ನು ವಿತರಿಸಲು ಅನುಕೂಲವಾಗುವಂತೆ ಅಟಲ್‌ಜೀ ಜನಸ್ನೇಹಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಆ) ಪ್ರತಿ ನಾಡಕಛೇರಿಗಳಲ್ಲಿ ವಿದ್ಯುತ್ ಅಭಾವವನ್ನು ತಡೆಗಟ್ಟಲು ಸೋಲಾರ್ ಯುಪಿಎಸ್ ಅನ್ನು ಅಳವಡಿಸಲಾಗಿರುತ್ತದೆ ಹಾಗೂ ಬಿಎಸ್‌ಎನ್‌ಎಲ್ ಮುಖಾಂತರ VPVoBB ಸಂಪರ್ಕ ನೀಡಲಾಗಿರುತ್ತದೆ. ಆದರೆ ಮಾಡಬಾಳ್ ಗ್ರಾಮದಲ್ಲಿ ಸ್ಥಾಪಿಸಿರುವ ಅಟಲ್‌ಜೀ ಜನಸ್ನೇಹಿ ಕೇಂದ್ರದಲ್ಲಿ VPVoBB ಸಂಪರ್ಕ ಸಾಧ್ಯವಿಲ್ಲದ ಕಾರಣ ವೈಮ್ಯಾಕ್ಸ್ ಸಂಪರ್ಕ ಒದಗಿಸಿರುತ್ತಾರೆ.

ಇ) ಅಂತರ್ಜಾಲ ಸಂಪರ್ಕವಿಲ್ಲದಿರುವ ನಾಡಕಛೇರಿಗಳಿಗೆ ಬಿಎಸ್‌ಎನ್‌ಎಲ್ ವತಿಯಿಂದ ಒದಗಿಸಲಾಗಿದ್ದ ವೈಮ್ಯಾಕ್ಸ್ ಸೇವೆಯನ್ನು ಬಿಎಸ್‌ಎನ್‌ಎಲ್ ರವರ ಕೇಂದ್ರೀಕೃತ ಕಾರ್ಯನೀತಿ ನಿರ್ಣಯದ ಮೇಲೆ ದಿನಾಂಕ: 31.05.2014 ರಿಂದ ಸ್ಥಗಿತಗೊಳಿಸಲಾಗಿರುತ್ತದೆ.

ಈ ಕುರಿತಂತೆ ಸಾರ್ವಜನಿಕರಿಗೆ ಒದಗಿಸಬೇಕಾಗಿರುವ ಸೇವೆಗಳಲ್ಲಿ ಅಂತ ರ್ಜಾಲ ಸಂಪರ್ಕದ ಕಡಿತದಿಂದ ಯಾವುದೇ ತೊಂದರೆ ಉಂಟಾಗ ದಂತೆ ನೋಡಿಕೊಳ್ಳಲು ತಾತ್ಕಾಲಿಕ ಅಂತರ್ಜಾಲ ವ್ಯವಸ್ಥೆಗಾಗಿ ಡೆಟಾ ಕಾರ್ಡನ್ನು ಉಪಯೋಗಿಸಲು ಅಥವಾ ಅಂತರ್ಜಾಲ ಸಂಪರ್ಕದ ಕಾರ್ಯಸಾಧ್ಯ ವ್ಯವಸ್ಥೆಯಿರುವ ಸಮೀಪದ ಕಟ್ಟಡಕ್ಕೆ ತಾತ್ಕಾಲಿಕವಾಗಿ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲು ತಿಳಿಸಿ, ವೈಮ್ಯಾಕ್ಸ್ ಸಂಪರ್ಕವನ್ನು ಕಲ್ಪಿಸಿರುವಂತಹ ನಾಡಕಛೇರಿಯ ಜಿಲ್ಲಾಧಿಕಾರಿಗಳಿಗೆ ದಿನಾಂಕ: 31.05.2014ರಂದು ಪತ್ರ ಬರೆಯಲಾಗಿರುತ್ತದೆ.

ಬರ ಪರಿಸ್ಥಿತಿ

1043 (938); ಶ್ರೀ ಬಣಕಾರ್ ಯು. ಬಿ. (ಹಿರೇಕೆರೂರು)

ಅ) ರಾಜ್ಯದಲ್ಲಿ 2013–14ನೇ ಸಾಲಿನಲ್ಲಿ ಬರಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿದ ತಾಲ್ಲೂಕುಗಳು ಯಾವುವು; ಈ ಬಗ್ಗೆ ಯಾವಾಗ ಆದೇಶ ಹೊರಡಿಸಲಾಗಿದೆ;

ಆ) ಆ ತಾಲ್ಲೂಕುಗಳ ಬರ ಪರಿಸ್ಥಿತಿ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಬರಪರಿಸ್ಥಿತಿ ನಿರ್ವಹಣೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ವಿವರ ನೀಡುವುದು;

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಮಂತ್ರಿಗಳು)

ಅ) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 234 ಟಿಎನ್‌ಆರ್ 2013 (3) ದಿನಾಂಕ: 16.11.2013, 21.12.2013 ಹಾಗೂ ಆರ್‌ಡಿ 45 ಟಿಎನ್‌ಆರ್ 2014, ದಿನಾಂಕ: 25.02.2014ಗಳಲ್ಲಿ ಒಟ್ಟು 28 ಜಿಲ್ಲೆಗಳ 125 ತಾಲ್ಲೂಕುಗಳನ್ನು 2013–14ನೇ ಸಾಲಿಗೆ ಬರಪೀಡಿತ ಪ್ರದೇಶಗಳೆಂದು